O.S. No. 38/2017
DW. - 1

**ಸಾಕ್ಷಿಗೆ ಕನ್ನಡ ಬಾರದ್ದರಿಂದ ಹಿಂದಿಗೆ ಭಾಷಾಂತರಿಸಲು ಭಾಷಾಂತಕಾರರನ್ನು ನೇಮಿಸಲು ಕೋರಿದ್ದು ಇದೇ ನ್ಯಾಯಾಲಯದ ವಕೀಲರಾದ ಮತ್ತು ಕನ್ನಡ ಮತ್ತು ಹಿಂದಿ ಭಾಷೆ ತಿಳಿದಿರುವ ಶ್ರೀ.ಎ.ಎ ವಕೀಲರು ಭಾಷಾಂತರಿಸಲು ಮುಂದೆ ಬಂದಿದ್ದು ಉಭಯ ಪಕ್ಷಗಾರರು ಒಪ್ಪಿರುತ್ತಾರೆ.**

**ದಿನಾಂಕಃ 13-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ಶ್ರೀ. ಎಂ.ಕೆ.ಜಿ. ವಕೀಲರಿಂದ**

ಸಾಕ್ಷಿಗೆ ಮುಖ್ಯ ವಿಚಾರಣ ಪ್ರಮಾಣ ಪತ್ರಿಕೆಯನ್ನು ತೋರಿಸಿ ಅದರಲ್ಲಿ ಬರೆದಿರುವುದನ್ನು ಓದಿ ಸಹಿ ಮಾಡಿದ್ದೇನೆಯೇ ಎಂದರೆ ಸಾಕ್ಷಿಯು ಓದಲು ಬರುವುದಿಲ್ಲ, ಸಹಿ ಮಾಡಿದ್ದೇನೆ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರಿಕೆಯ ಅಂಶಗಳು ನನ್ನ ಮಾಹಿತಿಯಂತೆ ಬರೆಯಲಾಯಿತು. ನಿಪಿ-1 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿರುವ ಎಲ್ಲ ಸಹಿಗಳು ಮತ್ತು ಎಡಗೈ ಎಬೆರಳಿನ ಗುರುತು ಮತ್ತು ಭಾವ ಚಿತ್ರ ವನ್ನು ಸಾಕ್ಷಿಯು ತನ್ನದೇ ಎಂದು ಹೇಳಿರುತ್ತಾರೆ. ನಿಪಿ-1 ನ್ನು ಸೈಯದ್ ತಾರಿಕ್ ಹಸನ್ ರಜ್ವಿ ಎಂಬ ವಕೀಲರು ಕರಡು ತಯಾರಿಸಿದ್ದಾರೆ ಎಂದರೆ ಗೊತ್ತಿಲ್ಲ. ನಿಪಿ-1 ರ ಪ್ರಕಾರ ಇಲ್ಲಿಯವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-1 ರ ವಿಳಾಸದಲ್ಲಿಯೇ ವಾಸವಿದ್ದೇನೆ. ನಿಪಿ-4 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿರುವ ಸಹಿಯನ್ನು ಸಾಕ್ಷಿಯು ತನ್ನ ಸಹಿ ಎಂದು ಒಪ್ಪಿರುತ್ತಾರೆ. ನಿಪಿ-2 ಕ್ಕೆ ನಾನು ಉತ್ತರಿಸಿಲ್ಲ. ನಿಪಿ-2 ರ ನಂತರ ನಾನು ಇನ್ನೊಂಷ್ಟು ಸಮಯ ಬೇಕೆಂದು ನಾನು ವಾದಿಯಲ್ಲಿ ಕೇಳಿದ್ದೆ ಎಂದರೆ ಸರಿಯಲ್ಲ. ನಿಪಿ-2 ರ ನಂತರ ನಾನು ತಯಾರಿದ್ದೇನೇ ಎಂದರೆ ಇಲ್ಲ. ವಾದಿಯು ಹಣ ಸಿದ್ದವಿದೆ ನೊಂದಾವಣೆ ಮಾಡಿಕೊಡಿ ಎಂದು ಅನೇಕ ಬಾರಿ ಕೇಳಿದರು ಎಂದರೆ ಸರಿಯಲ್ಲ.

ವಾದಿಯು ಎರಡನೇ ಬಾರಿ ನನಗೆ ನೋಟೀಸು ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-5 ನ್ನು ತೋರಿಸಲಾಗಿ ಅದರಲ್ಲಿರುವ ಗೆ ವಿಳಾಸ ಸಾಕ್ಷಿಯು ತನ್ನದೇ ಎಂದು ಹೇಳಿರುತ್ತಾರೆ.

ಮೊದಲಿಗೆ ಈ ದಾವೆಯಲ್ಲಿ ಡಿಕ್ರಿಯ ನಂತರ ಅಮಲ್ಜಾರಿ ಅರ್ಜಿ ಸಂಖ್ಯೆ 71/2017 ರಲ್ಲಿ ವಾದಿಯು ರೂ. 2,50,000/- ಗಳನ್ನು ಠೇವಣಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಅಮಲ್ಜಾರಿ ಅರ್ಜಿಯಲ್ಲಿ ನಾನು ತಕರಾರು ಸಲ್ಲಿಸಿದ್ದೆ ಎಂದರೆ ಗೊತ್ತಿಲ್ಲ. ನಾನು ವಾದಿಯಿಂದ ಪಡೆದ ರೂ.5,00,000/-ಗಳನ್ನು ತಿಂದು ಹಾಕಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ನಾನು ವಾದಿಯಿಂದ ಪಡೆದ ರೂ.1,30,000/- ಗಳನ್ನು ಹಿಂದಿರುಗಿಸಿದ್ದೇನೆ ಎನ್ನುತ್ತಾರೆ. ನಾನು ವಾದಿಯಿಂದ ರೂ.1,30,000/- ರೂಗಳನ್ನು ಪಡೆದ ಬಗ್ಗೆ, ದಿನಾಂಕ ಮತ್ತು ಮರುಪಾವತಿಯ ಬಗ್ಗೆ ನನ್ನ ಲಿಖಿತ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ನಾನು ವಾದಿಯಿಂದ ರೂ.1,30,000/- ಗಳನ್ನು ಪಡೆದಿದ್ದು ಅದನ್ನು ಹಿಂದಿರುಗಿಸಿದ್ದೇನೆ ಎಂದು ಸುಳ್ಳು ಎಂದರೆ ಸರಿಯಲ್ಲ. ನಾನು ಅನಕ್ಷರಸ್ತ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿ ಮತ್ತು ಅವರ ಪರ ವಕೀಲರು ನೋಡಿ ತಿಳಿದುಕೊಂಡಿರುತ್ತಾರೆ.)

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**